

ನಂದಾದೀಪ

**ತಮ್ಮ ಜೊತೆಗೆ ಇರುವವರಿಗೆ ತಾನು ವಿಶೇಷ ಮಹತ್ವ ನೀಡುತ್ತಿದ್ದೇನೆ ಎಂದು ಅನಿಸುವಂತೆ ನಡೆದುಕೊಳ್ಳುತ್ತಿದ್ದುದು ಕಾರ್ನಾಡರ ವ್ಯಕ್ತಿತ್ವದ ವಿಶೇಷ.**

**ಜಯಂತಿ ಮರುಳಸಿದ್ದಪ್ಪ**

# ಚೈತನ್ಯದ ಚಿಲುಮೆ

ನಾನು ಗಿರೀಶ ಕಾರ್ನಾಡ ಅವರನ್ನು ಮೊದಲು ಭೇಟಿಯಾಗಿದ್ದು ‘ಚೆಲುವಿ’ ಕಿರುಚಿತ್ರದ ಪಾರ್ಟಿಯಲ್ಲಿ. ಅವರಿಗೆ ನನ್ನನ್ನು ಕಪ್ಪಣ್ಣನವರು ಪರಿಚಯಿಸಿದರು. ನಾನಲ್ಲಿಗೆ ಹೋದಾಗ ಕೂರಲಿಕ್ಕೆ ಜಾಗವೇ ಇರಲಿಲ್ಲ. ಆಗ ಗಿರೀಶರು ಮಧ್ಯದಲ್ಲಿ ಒಂದು ಸ್ಟೂಲ್ ಹಾಕಿ ಕೂಡಿಸಿದರು; ಆಪ್ತವಾಗಿ ಮಾತನಾಡಿಸಿದರು. ಇಷ್ಟು ದೊಡ್ಡ ಮನುಷ್ಯ ಮೊದಲ ಭೇಟಿಯಲ್ಲಿಯೇ ನನ್ನ ಜೊತೆ ಇಷ್ಟು ಆಪ್ತವಾಗಿ ನಡೆದುಕೊಳ್ಳುತ್ತಿದ್ದಾರಲ್ಲ ಎಂದು ಅಚ್ಚರಿಯಾಯಿತು.

ಕಪ್ಪಣ್ಣ ಅವರ ಮನೆಯಲ್ಲಿಯೇ ಇನ್ನೊಮ್ಮೆ ‘ಅಗ್ನಿ ಮತ್ತು ಮಳೆ’ ನಾಟಕದ ರೀಡಿಂಗ್ ಇತ್ತು. ಅದಕ್ಕೆ ನಾನು, ಮರುಳಸಿದ್ದಪ್ಪ ಮತ್ತು ಅನಂತಮೂರ್ತಿ ಹೋಗಿದ್ದೆವು. ಅಲ್ಲಿ ತುಂಬ ಜನ ಬರಹಗಾರರು ಬಂದಿದ್ದರು. ಅಷ್ಟರಲ್ಲಾಗಲೇ ನಾನು ಎಂ.ಎಸ್. ಸತ್ಯು ಅವರ ಜೊತೆ ಕೆಲಸ ಮಾಡಿದ್ದೆ. ಗಿರೀಶರ ನಾಟಕ ಓದುತ್ತಿರುವಾಗ ಈ ಪಾತ್ರಕ್ಕೆ ಹೀಗೆ ಕಾಸ್ಟ್ಯೂಮ್ ಇದ್ರೆ ಚೆನ್ನಾಗಿರುತ್ತದೆ ಎಂದು ಮನಸಲ್ಲೇ ಕಲ್ಪಿಸಿಕೊಳ್ಳುತ್ತಿದ್ದೆ. ಆ ನಾಟಕಕ್ಕೆ ವಸ್ತ್ರ ವಿನ್ಯಾಸ ಮಾಡಬೇಕು ಎಂಬ ಆಸೆಯೂ ನನಗಿತ್ತು. ನನ್ನ ಜನ್ಮದಿನವೂ ಅವತ್ತೇ ಆಗಿತ್ತು. ನಾಟಕ ವಾಚನ ಮುಗಿದ ಮೇಲೆ ಗಿರೀಶರು ತಮಗೆ ಕೊಟ್ಟಿದ್ದ ಹೂಗುಚ್ಛಗಳನ್ನು ನನಗೆ ಕೊಟ್ಟರು. ‘ಮನೆಗೆ ನಾನೇ ಬಿಡ್ತೀನಿ ಬನ್ನಿ’ ಎಂದು ಕರೆದುಕೊಂಡು ಬಂದರು. ದಾರಿಯುದ್ದಕ್ಕೂ ಮಾತಾಡಿಕೊಂಡು ಬಂದೆ. ಅವರ ನಾಟಕದ ಪಾತ್ರಗಳಿಗೆ ಕಾಸ್ಟ್ಯೂಮ್ ಹೇಗಿರಬೇಕು ಎಂಬುದನ್ನು ಕಲ್ಪಿಸಿಕೊಂಡಿದ್ದನ್ನೆಲ್ಲ ಹೇಳಿದೆ. ಆಗ ನನ್ನ ಮಗ ಚೈತನ್ಯ ಸೆಂಟ್ರಲ್ ಯೂನಿವರ್ಸಿಟಿ ಹೈದರಾಬಾದ್‌ನಲ್ಲಿ ಓದುತ್ತಿದ್ದ. ಅವನಿಗೆ ನಾಟಕ, ಸಿನಿಮಾಗಳಲ್ಲಿ ಆಸಕ್ತಿ ಇದೆ ಎಂದೂ ಹೇಳಿದೆ. ಅವತ್ತು ಬಹುಶಃ ನಾನು ಚೈತನ್ಯನ ಕುರಿತು ಸ್ವಲ್ಪ ಹೆಚ್ಚೇ ಮಾತಾಡಿದ್ದೆ ಅನಿಸುತ್ತದೆ. ತಾಯಿ ಯಾವತ್ತೂ ಮಕ್ಕಳ ಬಗ್ಗೆ ಸ್ವಲ್ಪ ಜಾಸ್ತಿಯೇ ಹೇಳುತ್ತಾಳೆ ಅಲ್ಲವೇ... ನಾನು ಕಾರಿನಿಂದ ಇಳಿಯುವ ಹೊತ್ತಿಗೆ ಗಿರೀಶರು, ‘ನಿನ್ನ ಮಗನ ಹಳೆಯ ಚಿತ್ರಗಳನ್ನೆಲ್ಲ ಹಾಗೆಯೇ ಇಟ್ಟಿದ್ದೀಯಾ?’ ಎಂದು ಕೇಳಿದರು. ‘ಇಟ್ಟಿದೀನಿ’ ಅಂದೆ. ‘ಹಾಗೇ ಇಟ್ಟುಕೊಂಡಿರು. ಅವು ಮುಂದೆ ಬೇಕಾಗುತ್ತವೆ’ ಎಂದು ಹೇಳಿ ಹೋದರು.



ಲೇಖಕಿ ಜಯಂತಿ ಜೊತೆ ಗಿರೀಶ ಕಾರ್ನಾಡರು